ಬನಹಟ್ಟಿ ನೀರು ಸರಬರಾಜು ನಿರ್ವಹಣೆಯನ್ನು ನಗರಸಭೆಯಿಂದ ನಿರ್ವಹಿಸುತ್ತಿದ್ದು, ಕೃಷ್ಣನದಿ ಮೂಲದಿಂದ 45 ವರ್ಷಗಳಷ್ಟು ಹಳೆಯದಾದ ಫಿಲ್ಟರ್ ಹೌಸ್ ಹಾಗೂ ಜಾಕ್‌ವೆಲ್‌ನಿಂದ ನೀರು ಪೂರೈಕೆ ಮಾಡಲಾಗುತ್ತಿದೆ.

194 ಶ್ರೀ ಸಿದ್ದು ಸವದಿ

ಮಾನ್ಯ ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು

ಅ) ಉತ್ತರ ಕರ್ನಾಟಕದ ಸಣ್ಣ ಪಟ್ಟಣಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಯೋಜನೆಯನ್ನು (ಕೆಯುಐಡಿಎಫ್ ಸಿ) ಎ.ಡಿ.ಬಿ.ಯಿಂದ ಸಾಲ ಪಡೆದು ಅಭಿವೃದ್ಧಿಪಡಿಸುವ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಎ.ಡಿ.ಬಿ.ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದ ಮೊದಲನೇ ಟ್ರ್ಯಾಂಚ್‌ನ ಸಾಲ ಹಾಗೂ ಯೋಜನಾ ಒಪ್ಪಂದಗಳಿಗೆ ಜನವರಿ, 2008ರಲ್ಲಿ ಸಹಿಮಾಡಲಾಗಿದ್ದು, ಸಾಲವು ಏಪ್ರಿಲ್–2008ರಿಂದ ಚಾಲ್ತಿಗೆ ಬಂದಿರುತ್ತದೆ. ಮೊದಲನೇ ಟ್ರ್ಯಾಂಚ್‌ನಲ್ಲಿ ಮೂರು ಪಟ್ಟಣಗಳಾದ ಹೊಸಪೇಟೆ, ಹಾವೇರಿ ಹಾಗೂ ರಾಯಚೂರು ನಗರಗಳನ್ನು ಆಯ್ಕೆಮಾಡಲಾಗಿದೆ.

ಸಮಾಲೋಚಕರು ಸರ್ವೆ ಕಾರ್ಯ ಕೈಗೊಂಡು ವಿಸ್ತೃತ ಯೋಜನಾ ವರದಿಯನ್ನು ತಯಾರಿಸುತ್ತಾರೆ. ಮೊದಲನೇ ಟ್ರ್ಯಾಂಚ್‌ನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ) ಹಾಲಿ ಮಂಜೂರಿಯಾದ ಹಣದಲ್ಲಿ ಅಯಾ ನಗರಗಳ ಸಂಪೂರ್ಣ ಅಭಿವೃದ್ಧಿ ಆಗುವುದೇ?

ಲಭ್ಯವಿರುವ ಎಡಿಬಿ ಸಾಲದ ಮೊತ್ತದ ಮಿತಿಗೊಳಪಟ್ಟಂತೆ ಆದ್ಯತೆಯ ಮೇರೆಗೆ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ಇಲ್ಲವಾದಲ್ಲಿ ಯಾವ ರೀತಿ ಇನ್ನುಳಿದ ಕೆಲಸಗಳನ್ನು ಪೂರೈಸಲಾಗುವುದು; ಈಗಾಗಲೇ 'ಆ' ನಲ್ಲಿ ಉತ್ತರಿಸಿರುವ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) 50 ಸಾವಿರ ಜನಸಂಖ್ಯೆ ಮೇಲ್ಪಟ್ಟು ಇರುವ ನಗರಗಳನ್ನು ಮಾತ್ರ ಎಡಿಬಿಯಲ್ಲಿ ಆಯ್ಕೆ ಮಾಡಿದ್ದು, ಇನ್ನುಳಿದ ಪಟ್ಟಣಗಳ ಅಭಿವೃದ್ಧಿಗೆ ಯಾವ ಕ್ರಮ ಕೈಗೊಳ್ಳಲಾಗುವುದು;

ಇನ್ನುಳಿದ ಪಟ್ಟಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನಾ ವರದಿ ಸಿದ್ದಪಡಿಸಲು ಅಧ್ಯಯನ ನಡೆಸಲಾಗುತ್ತಿದೆ.

ಊ) ತೇರದಾಳ ಮತ ಕ್ಷೇತ್ರದಲ್ಲಿ ತೇರದಾಳ ಮತ್ತು ಮಹಾಲಿಂಗಪುರ ಈ ಎರಡು ಪುರಸಭೆಗಳು ಇದ್ದು, ಅವುಗಳನ್ನು ಎಡಿಬಿ ಯಲ್ಲಿ ಯಾವಾಗ ತೆಗೆದುಕೊಳ್ಳಲಾಗುವುದು?

ಎ.ಡಿ.ಬಿ.ನೆರವಿನ ಯೋಜನೆಯಡಿ ಈಗಾಗಲೇ 25 ಪಟ್ಟಣಗಳನ್ನು ಆಯ್ಕೆ ಮಾಡಿ ಅಂತಿಮಗೊಳಿಸಲಾಗಿದ್ದು, ಈ ಹಂತದಲ್ಲಿ ಯಾವುದೇ ಪಟ್ಟಣಗಳನ್ನು ಈ ಯೋಜನೆಯಡಿ ಸೇರಿಸಲು ಅವಕಾಶವಿರುವುದಿಲ್ಲ.

195 ಶ್ರೀ ಸಿದ್ದು ಸವದಿ (ತೇರದಾಳ್)

ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ 2008–09 ರಲ್ಲಿ ಮೀನುಗಾರರಿಗೆ ಎಷ್ಟು ಮತ್ಸ್ಯಾಶ್ರಯ ಮನೆಗಳನ್ನು ಕೊಡಲಾಗಿದೆ (ಜಿಲ್ಲಾವಾರು ಮಾಹಿತಿ ಪೂರೈಸುವುದು)

2008–09ನೇ ಸಾಲಿನಲ್ಲಿ ಇದುವರೆವಿಗೆ ಮತ್ಸ್ಯಾಶ್ರಯ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ.

ಆ ತೇರದಾಳ ಮತಕ್ಷೇತ್ರಕ್ಕೆ ಎಷ್ಟು ಮನೆಗಳನ್ನು ಕೊಡಲಾಗಿದೆ; ಇಲ್ಲವಾದಲ್ಲಿ ಕಾರಣಗಳೇನು;

ಅನ್ವಯಿಸುವುದಿಲ್ಲ.

ಇ ತೇರದಾಳ ಮತಕ್ಷೇತ್ರದಲ್ಲಿ ಎಷ್ಟು ಜನ ಮೀನುಗಾರರಿರುವರು; ಇಲ್ಲಿಯವರೆಗೆ 2008–09 ರಲ್ಲಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ.,

ತೇರದಾಳ ಮತಕ್ಷೇತ್ರದಲ್ಲಿ ಅಂದಾಜು 400–500 ಜನ ಮೀನುಗಾರರು ಇದ್ದಾರೆ.

2008–09ನೇ ಸಾಲಿನಲ್ಲಿ ನೀಡಿರುವ ಸೌಲಭ್ಯಗಳು:

1) 10 ಜನ ಫಲಾನುಭವಿಗಳಿಗೆ ಬಲೆ ಖರೀದಿಗಾಗಿ ತಲಾ ರೂ.1000/– ಸಹಾಯಧನ ಮತ್ತು 12 ಜನ ಫಲಾನುಭವಿಗಳಿಗೆ ಮೀನು ಮಾರಾಟಕ್ಕೆ ಸೈಕಲ್ ಐಸ್‌ಬಾಕ್ಸ್ ಖರೀದಿಗಾಗಿ ತಲಾ ರೂ.1250/– ಸಹಾಯಧನ ಮಂಜೂರು ಮಾಡಿದ್ದು ಸವಲತ್ತನ್ನು ಶೀಘ್ರ ನೀಡಲಾಗುವುದು.
2) ಜಿಲ್ಲಾ ವಿಶೇಷ ಘಟಕ ಯೋಜನೆಯಡಿ ಒಬ್ಬ ಫಲಾನುಭವಿಗೆ ಮೀನುಗಾರಿಕೆ ಸಲಕರಣೆ ಖರೀದಿಗಾಗಿ ರೂ.5000/– ಸಹಾಯಧನ ಮಂಜೂರು ಮಾಡಿದ್ದು ಸವಲತ್ತನ್ನು ಶೀಘ್ರ ನೀಡಲಾಗುವುದು.